15226 107

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀರವಿಕುಮಾರ್ ಎನ್ ಇವರ ನಿಯಮ-72ರಡಿ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ

**ಸೂಚನೆ**

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕಲ್ಯಾ ಪಂಚಾಯಿತಿ ವ್ಯಾಪ್ತಿಯ ಹುಜಗಲ್‌ನ ಕಾಡಿನಲ್ಲಿ ವಾಸ ಮಾಡುತ್ತಿರುವ ಇರುಳಿಗ ಸಮುದಾಯದ ಜನರು ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುವ ಈ ಸಮುದಾಯದ ಜನರು ತಮ್ಮ ಜೀವನಕ್ಕೆ ಯಾವುದೇ ರೀತಿಯ ಭದ್ರತೆ ಇಲ್ಲದೆ ಬದುಕುತ್ತಿದ್ದಾರೆ. ಮನೆಗಳಿಲ್ಲದೆ ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದು ಇವರು ಇದುವರೆಗೂ ಹಕ್ಕುಪತ್ರ ಸಹ ಹೊಂದಿಲ್ಲದೆ ಇರುವುದು, ಅತ್ಯಂತ ನೋವಿನ ಸಂಗತಿಯಾಗಿದೆ. ಕುಡಿಯಲು ನೀರಿಲ್ಲದೆ ಗುಂಡಿಯಲ್ಲಿ ನೀರನ್ನು ತೆಳು ಬಟ್ಟೆಯ ಮುಖಾಂತರ ಸೋಸಿ ಕುಡಿಯುತ್ತಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಇರುಳಿಗ ಮಕ್ಕಳಿಗೆ ಸರಿಯಾದ ಶಿಕ್ಷಣವಿಲ್ಲ ಮತ್ತು ಚರಂಡಿ ವ್ಯವಸ್ಥೆ ಇಲ್ಲ ಹಾಗೂ ಶೌಚಾಲಯ ವ್ಯವಸ್ಥೆಯು ಇರುವುದಿಲ್ಲ. ಅವರು ವಾಸಿಸುತ್ತಿರುವ ಸ್ಥಳಕ್ಕೆ ಹಕ್ಕುಪತ್ರ ಒದಗಿಸಿ ಕಂದಾಯ ಗ್ರಾಮವಾಗಿ ಘೋಷಿಸುವ ಮೂಲಕ ಶಾಶ್ವತ ಪರಿಹಾರ ಮಾಡಿ ಈ ಸಮುದಾಯದ ಜನರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

**ಹೇಳಿಕೆ..**

1. ರಾಮನಗರಜಿಲ್ಲೆಯ ಮಾಗಡಿ ತಾಲ್ಲೂಕಿನ ಕಲ್ಯಾ ಪಂಚಾಯಿತಿ ವ್ಯಾಪ್ತಿಯ ಹುಜಗಲ್‌ನ ಕಾಡಿನಲ್ಲಿ ವಾಸ ಮಾಡುತ್ತಿರುವ ಇರುಳಿಗ ಸಮುದಾಯದ ಜನರು ಸ.ನಂ.98 ರ ಗೋಮಾಳ ಜಮೀನಿನ ಬೆಟ್ಟದ ಮೇಲೆ ಗುಡಿಸಲು ಕಟ್ಟಿಕೊಂಡು 11 ಕುಟುಂಬಗಳು ವಾಸ ಮಾಡುತ್ತಿದ್ದಾರೆ.
2. ಈ 11 ಕುಟುಂಬಗಳಲ್ಲಿ 04 ಕುಟುಂಬಗಳು 94 ಸಿ ರಡಿ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಬೆಟ್ಟದ ಮೇಲಕ್ಕೆ ರಸ್ತೆ, ಕುಡಿಯುವ ನೀರು ಹಾಗೂ ಇತರೆ ಮೂಲಭೂತ ಸೌಕರ್ಯ ಕಲ್ಪಿಸಲು ಸಾಧ್ಯವಾಗದ ಕಾರಣ ಸದರಿಯವರಿಗೆ ಮಂಜೂರಾತಿ ಮಾಡಿರುವುದಿಲ್ಲ.
3. ಸದರಿ ಕುಟುಂಬಗಳಿಗೆ ನಿವೇಶನ ಕಲ್ಪಿಸುವ ಸಲುವಾಗಿ ಇದೇ ಸ.ನಂ.98ರ ಒಂದು ಭಾಗದಲ್ಲಿ ರಸ್ತೆ ಹೊಂದಿಕೊಂಡಂತೆ 0-20 ಗುಂಟೆ ಜಮೀನನ್ನು ನಿವೇಶನ ಮಂಜೂರಾತಿಗಾಗಿ ಗುರುತಿಸಿದ್ದು, ಪ್ರಸ್ತಾವನೆ ತಯಾರಿಸಿ ಉಪವಿಭಾಗಾಧಿಕಾರಿಗಳ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವ ಹಂತದಲ್ಲಿ ಬಾಕಿಯಿರುತ್ತದೆ.
4. ಸದರಿ ಕುಟುಂಬಗಳನ್ನು ಮನವೊಲಿಸಿ ಅವರನ್ನು ಈಗ ವಾಸ ಮಾಡುತ್ತಿರುವ ಬೆಟ್ಟದ ಮೇಲಿಂದ ತೆರವುಗೊಳಿಸಿ ಬೆಟ್ಟದ ಕೆಳಗಡೆ ವಾಸಿಸಲು ನಿವೇಶನ ಹಂಚಿಕೆ ಮಾಡಲು ಕ್ರಮವಹಿಸಲಾಗುವುದು.
5. ಸಮಾಜ ಕಲ್ಯಾಣ ಇಲಾಖೆಯಿಂದ ಸದರಿಯವರಿಗೆ ಸರ್ಕಾರದ ವತಿಯಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿ, ಸದರಿರವರನ್ನು ಮನವೊಲಿಸಿ ಮಕ್ಕಳಿಗೆ ಶಿಕ್ಷಣ ನೀಡಲು ಕ್ರಮವಹಿಸಲಾಗುವುದು.

ಸಂಖ್ಯೆ: ಆರ್‌ಡಿ 36 ಎಲ್‌ಜಿಕ್ಯೂ 2024 (ಇ)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು